## ಸಿವ್ಹಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

## ಸಿ.ಸಿ. ನಂಃ 715/2021

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ
ಗುರುಮಿಠಕಲ್ ಪೊಲೀಸ್ ಠಾಣೆ

// ವಿರುದ್ದ //

ಆರೋಪಿತರು ಃ ಫಾತೀಮ ಮತ್ತು ಇತರರು.

## ದೋಷಾರೋಪಣೆ

ನಾನು ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 16.09.2021 ರಂದು ಸಂಜೆ 07.00 ಗಂಟೆ ಸುಮಾರಿಗೆ ಗುರುಮಠಕಲ್ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಚಿಂತಕುಂಟಾ ಗ್ರಾಮದಲ್ಲಿ ಚಾಸಾ-1ಶ್ರೀಮತಿ ಮೈಬೂಬಿ ರವರು ತನ್ನ ಮನೆಯಲ್ಲಿದ್ದಾಗ 1 ರಿಂದ 6 ನೇ ಅರೋಪಿತರಾದ ನೀವು ಎಲ್ಲರೂ ಕೂಡಿ ಹಲ್ಲೆ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಹೋಗಿದ್ದು, ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.143 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 1 ರಿಂದ 5 ನೇ ಆರೋಪಿತರಾದ ನೀವು ದೊಂಬಿ ಮಾಡುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಹೋಗಿ ದೊಂಬಿ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.147 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಚಾಸಾ-1 ರವರ ಮನೆಯ ಮುಂದಿನ ಅಂಗಳದಲ್ಲಿ ಅಕ್ರಮ ಪ್ರವೇಶ ಮಾಡಿ ಅಲ್ಲಿ ಜೋಡಿಸಿದ ಕಲ್ಲಿನ ಕಂಪೌಂಡ ಗೊಡೆಯನ್ನು ಬಿಳಿಸುತ್ತಿದ್ದಾಗ ಚಾಸಾ-1 ರವರು ಯಾಕ ನಮ್ಮ ಗೊಡೆ ಕೆಡವಾಕತ್ತಿರಿ ಅಂತಾ ಕೇಳಿದಕ್ಕೆ 2 ನೇ ಆರೋಪಿತನಾದ ನೀನು ಟ್ರ್ಯಾಕ್ಟರ್ ನಮ್ಮ ಮನೆಗೆ ಹೋಗಾಕ ದಾರಿ ಬೇಕು ಗೋಡೆ ಯಾಕ ಕಟ್ಟಿದಿ ಸೂಳೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀಯಾ. 4 ನೇ ಆರೋಪಿತನಾದ ನೀವು ಚಾಸಾ-1 ರವರಿಗೆ ಯಾರ ಬಂದು ಏನ್ ಕಿತಕೊತಾರ ನೋಡುತ್ತೇನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀಯಾ. 3 ಮತ್ತು 5 ನೇ

ಆರೋಪಿತರಾದ ನೀವು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.504 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 4 ನೇ ಆರೋಪಿತನಾದ ನೀವು ಚಾಸಾ-1 ರವರ ಎದೆಯ ಮೇಲಿನ ಸೀರೆ ಹಿಡಿದು ಕೆಳಗೆ ದಬ್ಬಿ ನಂತರ ಆಕೆಯ ಮೈ ಮೇಲೆ ಬಿದ್ದು ಅವಮಾನ ಮಾಡಿರುತ್ತೀಯಾ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.353 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 4 ನೇ ಆರೋಪಿತನಾದ ನೀವು ಚಾಸಾ-1 ರವರ ಎದೆಯ ಮೇಲಿನ ಸೀರೆ ಹಿಡಿದು ಕೆಳಗೆ ದಬ್ಬಿ ನಂತರ ಆಕೆಯ ಮೈ ಮೇಲೆ ಬಿದ್ದು ಅವಮಾನ ಮಾಡಿರುತ್ತೀಯಾ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.323 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

6. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ 3 ನೇ ಆರೋಪಿತನಾದ ನೀವು ಮೈಮೂದ @ ಮೈಬೂಬ ಎಲ್ಲಿದ್ದಾನೆ ಅವ ನಮ್ಮ ಹೊಲದಿಂದ ಹೊದರೆ ಅವನ ಕಾಲ ಕಡಿತಿನಿ ಮತ್ತು ಅವ ಊರಿಗೆ ಇನ್ನೊಂದು ಸಾರಿ ಬಂದರೆ ಖಲಾಸ್ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿರುತ್ತೀಯಾ. 6 ನೇ ಆರೋಪಿತನಾದ ನೀವು ತುರಕು ಸೂಳೆ ಮಕ್ಕಳಿಗೆ ಊರು ಬಿಟ್ಟು ಓಡಿಸೋಣ ಎಂದು ಬೆದರಿಕೆ ಹಾಕಿರುತ್ತೀರಿ. 3 ನೇ ಆರೋಪಿತನಾದ ನೀವು ಚಾಸಾ-1 ರವರಿಗೆ ಸೂಳೆ ಇವಾಗ ಹೋಗತಿವಿ ಮತ್ತೊಮ್ಮೆ ಬಂದು ನಿನಗೆ ಖಲಸಾ ಮಾಡುತ್ತಿವಿ ಅಂತಾ ಜೀವದ ಬೆದರಿಕೆ ಹಾಕಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ. ದಂ. ಸಂ. ಕಲಂ.506 ಸಂಗಡ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕಃ 13.06.2025

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.